ಕರ್ನಾಟಕ ಸರ್ಕಾರ

ಕಡತ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಜೆಜೆ/80-100/2017-18

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು-12, ದಿನಾಂಕ 24-06-2017.

## ಜ್ಞಾಪನ

ವಿಷಯ: 2017-18ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಜಿಲ್ಲಾ ಉಪನಿರ್ದೇಶಕರ/ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಂದ ಬಂದಿರುವ ಮನವಿಗಳು
2. ಸರ್ಕಾರದ ಪತ್ರ ಸಂಖ್ಯೆ ಇಡಿ 373 ಎಸ್‌ಹೆಚ್‌ಹೆಚ್ 2017 ದಿನಾಂಕ 12-06-2017

*******

ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ ಪ್ರಥಮ ಪಿಯುಸಿ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಒತ್ತಡ/ಬೇಡಿಕೆ ಉಂಟಾಗುತ್ತಿರುವುದಾಗಿ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುತ್ತಾರೆ. ಸದರಿ ಕೋರಿಕೆಗಳನ್ನು ಪರಿಶೀಲಿಸಲಾಯಿತು.

2017-18ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸಿ ಪ್ರತಿ ಕಾಲೇಜಿನ ಮುಂದೆ ನಮೂದಿಸಿರುವ ಸಂಯೋಜನೆ ಮತ್ತು ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ 20 (ಇಪ್ಪತ್ತು) ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

| ಕ್ರಸ | ಕಾಲೇಜಿನ ಸಂಕೇತ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಸಂಯೋಜನೆ |
|---|---|---|---|
| 1 | JJ-096 | ಶ್ರೀ ಹರಭಟ್ಟ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುಂದಗೋಳ. | HESP, EGBA. |
| 2 | JJ-018 | ಆರ್.ಎಲ್.ಎಸ್. ಪದವಿ ಪೂರ್ವ ಕಾಲೇಜು, ಧಾರವಾಡ. | EBAS, PCMB. |
| 3 | JJ-088 | ಗುಡ್ ನ್ಯೂಸ್ ಪದವಿ ಪೂರ್ವ ಕಾಲೇಜು, ಕಲಘಟಗಿ | HEBA. |

| | | | |
|---|---|---|---|
| 4 | JJ-090 | ಪ್ರೋಗ್ರೆಸ್ಸಿವ್ ಎಜುಕೇಷನ್ ಸೊಸಾಯಿಟಿಯ ಗರ್ಲ್ಸ್ ಇಂಗ್ಲೀಷ್ ಸಂಯುಕ್ತ ಪದವಿ ಪೂರ್ವ ಕಾಲೇಜು, ವಿದ್ಯಾಗಿರಿ, ಕಲಘಟಗಿ. | HEBA. |
| 5 | JJ-211 | ಹಿರೇಮಲ್ಲೂರ ಈಶ್ವರನ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಲ್ಯಾಣನಗರ, ಧಾರವಾಡ. | PCMB, PCMS. |
| 6 | JJ-221 | ಕೆ.ಎಲ್.ಇ. ಸಂಸ್ಥೆಯ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಸ್ವತಂತ್ರ ಪದವಿ ಪೂರ್ವ ಕಾಲೇಜು, ಸಂಶಿ, ಕುಂದಗೋಳ, ಧಾರವಾಡ. | HEBA, PCMB. |
| 7 | JJ-019 | ಅಂಜುಮನ್ ಸ್ವತಂತ್ರ ಪದವಿ ಪೂರ್ವ ಕಾಲೇಜು, ಧಾರವಾಡ | HEGP, OK.H.S.ED, EGBA, PCMB. |
| 8 | JJ-147 | ವಿಜಯನಗರ ಪದವಿ ಪೂರ್ವ ಕಾಲೇಜು, ವಿದ್ಯಾನಗರ, ಹುಬ್ಬಳ್ಳಿ, ಧಾರವಾಡ ಜಿಲ್ಲೆ. | HEBA. |
| 9 | JJ-006 | ಪರಪ್ಪ ಚನ್ನಪ್ಪ ಜಾಬಿನ ಪದವಿ ಪೂರ್ವ ಕಾಲೇಜು, ಹುಬ್ಬಳ್ಳಿ, ಧಾರವಾಡ. | PCMB. |
| 10 | JJ-011 | ಎಸ್‌ಜೆಎಂವಿಎಸ್ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು, ಜೆ.ಸಿ.ನಗರ, ಹುಬ್ಬಳ್ಳಿ, ಧಾರವಾಡ. | EBACs, HEBA. |
| 11 | JJ-136 | ಎಸ್.ಜೆ. ಗಂಗಾಧರ ಪದವಿ ಪೂರ್ವ ಕಾಲೇಜು, ಮೂರು ಸಾವಿರಮಠ ಆವರಣ, ಹುಬ್ಬಳ್ಳಿ, ಧಾರವಾಡ. | HEBA, EBAS. |

ಷರತ್ತುಗಳು:

1. ಈ ಅನುಮತಿಯು 2017–18ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಡೆಯತಕ್ಕದ್ದು.
4. ಹಾಲಿ ಅನುಮತಿಸಿರುವ ಹೆಚ್ಚುವರಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
6. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.
7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.

10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಛೇರಿಗೆ ಸಲ್ಲಿಸತಕ್ಕದ್ದು.
11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರತಿ ಎಂದು ಪರಿಗಣಿಸತಕ್ಕದ್ದಲ್ಲ.
12. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

"ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ"

24.6.18

ಜಂಟಿ ನಿರ್ದೇಶಕರು,
(ಮಾನ್ಯತೆ ಮತ್ತು ಅನುದಾನ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು,

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ ಜಿಲ್ಲೆ, ಧಾರವಾಡ. – ಮಾಹಿತಿಗಾಗಿ
2. ಸಂಭಂದಪಟ್ಟ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. 'ಇ' ಆಡಳಿತ ಶಾಖೆ, ಪಪೂಶಿಇ, ಬೆಂಗಳೂರು –ಅಂತರ್ ಜಾಲದಲ್ಲಿ ಅಳವಡಿಸಲು
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಎಎಸ್/80-100/2017-18.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ 24-06-2017.

## ಜ್ಞಾಪನ

ವಿಷಯ : 2017-18 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಪತ್ರ: ಇಡಿ 373 ಎಸ್‌ಹೆಚ್‌ಹೆಚ್ 2017 ದಿ:12.06.17.
2. ಸರ್ಕಾರದ ಪತ್ರ: ಇಡಿ 294 ಎಸ್‌ಹೆಚ್‌ಹೆಚ್ 2017 ದಿ:9.6.2017.
3. ಸರ್ಕಾರದ ಪತ್ರ: ಇಡಿ 294 ಎಸ್‌ಹೆಚ್‌ಹೆಚ್ 2017 ದಿ:6.6.2017.
4. ಕಾಲೇಜುಗಳಿಂದ ಬಂದಿರುವ ಪ್ರಸ್ತಾವನೆಗಳು.

-*-

2017-18 ನೇ ಶೈಕ್ಷಣಿಕ ಸಾಲಿಗೆ ಈ ಕೆಳಕಂಡ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಬೇಡಿಕೆಯನ್ನು ಸಲ್ಲಿಸಿದ್ದು ಉಲ್ಲೇಖ 1, 2 & 3 ರಲ್ಲಿ ತಿಳಿಸಿರುವಂತೆ ಆಯಾ ಕಾಲೇಜಿನ ಮುಂದೆ ತಿಳಿಸಿರುವಂತೆ ಪ್ರಥಮ ಪಿಯುಸಿಗೆ ಹೆಚ್ಚುವರಿಯಾಗಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

| ಕ್ರ ಸಂ | ಕಾಲೇಜು ಸಂಕೇತ | ಕಾಲೇಜಿನ ಹೆಸರು & ವಿಳಾಸ | ಸಂಯೋಜನೆ | ಹೆಚ್ಚುವರಿ ದಾಖಲಾತಿಗೆ ಅನುಮತಿಸಿದ ಸಂಖ್ಯೆ |
|---|---|---|---|---|
| 1. | AS 040 | ಕ್ರೈಸ್ಟ್ ಪದವಿ ಪೂರ್ವ ಕಾಲೇಜು, ಹೊಸೂರು, ಬೆಂಗಳೂರು | CAMS, CAME | 100 ರಿಂದ 120ಕ್ಕೆ |
| 2. | AS106 | ಇಂದಿರಾನಗರ ಪದವಿ ಪೂರ್ವ ಕಾಲೇಜು, ಇಂದಿರಾನಗರ, ಬೆಂಗಳೂರು | HEBA | 20 |
| 3. | AS631 | ಆರ್‌ಎನ್‌ಎಸ್ ಪದವಿ ಪೂರ್ವ ಕಾಲೇಜು, ಆರ್ ಆರ್ ನಗರ, ಬೆಂಗಳೂರು | PCMB, PCME, PCMCs, BASCs, BASBM, EBACs, EBAS | 20 |
| 4. | AS752 | ಗೋಪಾಲನ್ ಪದವಿ ಪೂರ್ವ ಕಾಲೇಜು, ದೊಡ್ಡೇನಕುಂದಿ, ಬೆಂಗಳೂರು | EBACs | 20 |
| 5. | AS691 | ಸುರಾನ ಪದವಿ ಪೂರ್ವ ಕಾಲೇಜು, ಕೆಂಗೇರಿ, ಬೆಂಗಳೂರು | EBACs | 20 |
| 6. | AS009 | ಜ್ಯೋತಿ ನಿವಾಸ್ ಪದವಿ ಪೂರ್ವ ಕಾಲೇಜು, ಹೊಸೂರು ರಸ್ತೆ, ಬೆಂಗಳೂರು | PCME, PCMB, EBAS, HEBA, HESP | 20 |
| 7. | AS418 | ದೀಕ್ಷಾ ಪದವಿ ಪೂರ್ವ ಕಾಲೇಜು, ಬೆಂಗಳೂರು | PCMB-3, PCMCs-4 | 20 |
| 8. | AS086 | ವಿವಿಎಸ್ ಪದವಿ ಪೂರ್ವ ಕಾಲೇಜು, ವಿವಿ ಪುರಂ, ಬೆಂಗಳೂರು | EBAS, EGBA | 20 |

ಷರತ್ತುಗಳು:

1. ಈ ಅನುಮತಿ 2017-18 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಡೆಯತಕ್ಕದ್ದು.
4. ಪ್ರಸ್ತುತ ಅನುಮತಿಸಿರುವ ಹೆಚ್ಚುವರಿ ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಅನುಮತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
6. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ
7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 20036 ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರ ಮೂಲಕ ಈ ಕಚೇರಿಗೆ ಸಲ್ಲಿಸತಕ್ಕದ್ದು.
11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ಪಠಿಭಾಘದ ಮಂಜೂರಾತಿ ಎಂದು ಪರಿಗಣಿಸತಕ್ಕದ್ದಲ್ಲ.
12. ಹೆಚ್ಚುವರಿ ವಿಷಯ / ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಧಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

24/6/18

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
2. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಗಣಕಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಚೇರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿ/ಸಿಬ್ಬಂದಿ-3/ EB-FF/ಹವಿದಾ/2017-18

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆರಸ್ತೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ,
ಬೆಂಗಳೂರು-12. ದಿನಾಂಕ 26-06-2017.

## ಜ್ಞಾಪನ

**ವಿಷಯ:** 2017-18ನೇ ಶೈಕ್ಷಣಿಕ ಸಾಲಿಗೆ ಸೀಮಿತಗೊಳಿಸಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಕುರಿತು.

**ಉಲ್ಲೇಖ:** ಜಿಲ್ಲಾ ಉಪನಿರ್ದೇಶಕರಿಂದ ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಸಲ್ಲಿಸಿರುವ ಕೋರಿಕೆ.

****

ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ 2017ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷಾ ಫಲಿತಾಂಶವು ಹೆಚ್ಚಾಗಿದ್ದು, ಪ್ರಥಮ ಪಿಯುಸಿ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಒತ್ತಡ/ಬೇಡಿಕೆ ಉಟಾಗುತ್ತಿರುವುದಾಗಿ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುತ್ತಾರೆ. ಸದರಿ ಕೋರಿಕೆಗಳನ್ನು ಪರಿಶೀಲಿಸಲಾಯಿತು.

2017ರ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶದ ಶೇಕಡಾ ಪ್ರಮಾಣವು ಹೆಚ್ಚಾಗಿರುವುದರಿಂದ, ಸಹಜವಾಗಿ ಹಲವು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಹೆಚ್ಚಿನ ಬೇಡಿಕೆ ಉಂಟಾಗುತ್ತಿರುವುದನ್ನು ಗಮನಿಸಿ 2017-18ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸಿ ಪ್ರತಿ ಕಾಲೇಜಿನ ಮುಂದೆ ನಮೂದಿಸಿರುವ ಸಂಯೋಜನೆ ಮತ್ತು ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ 20 (ಇಪ್ಪತ್ತು) ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

| ಕ್ರ.ಸ | ಸಂಕೇತ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಸಂಯೋಜನೆ ಮತ್ತು ವಿಷಯ ಸಂಕೇತ ಸಂಖ್ಯೆಗಳು |
|---|---|---|---|
| 01 | EB-176 | ತುಂಗಳ ವಿಜ್ಞಾನ ಪದವಿ ಪೂರ್ವ ಕಾಲೇಜು, ಬಾಗಲಕೋಟೆ ಜಿಲ್ಲೆ | PCMB-33,34,35,36 |
| 02 | EB-054 | ಎಂ ಎಚ್ ಎಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಕೆರೂರ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | HEBA-21,22,27,30 |
| 03 | EB-028 | ಆರ್.ಎಂ.ಜಿ ಸಂಯುಕ್ತ ಮುಧೋಳ, ಬಾಗಲಕೋಟೆ ಜಿಲ್ಲೆ | EBPA-22,27,28,30 |
| 04 | EB-011 | ಬಿ.ಹೆಚ್.ಎಸ್ ಟಿಜಿಪಿ ವಿಜ್ಞಾನ ಪದವಿ ಪೂರ್ವ ಕಾಲೇಜು, ಜಮಖಂಡಿ, ಬಾಗಲಕೋಟೆ ಜಿಲ್ಲೆ | HEPS- 21,22,29,28 |
| | | | EBPA-22,27,29,30 |
| | | | PCMB-33,34,35,36 |
| | | | PCMS-33,34,35,31 |
| 05 | EB-019 | ಎಸ್.ಜಿ.ಎಂ.ಕೆ ಪದವಿ ಪೂರ್ವ ಕಾಲೇಜು,ಬಾದಾಮಿ, ಬಾಗಲಕೋಟೆ | HEGP-21,22,24,29 |
| | | | HEPEd-21,22,29,52 |
| | | | EBPA-22,27,29,30 |
| | | | PCMB-33,34,35,36 |
| | | | PCMCs-33,34,35,41 |
| 06 | FF-003 | ಕರ್ನಾಟಕ ಪದವಿ ಪೂರ್ವ ಕಾಲೇಜು, ಬೀದರ್ | HEPS- 21,22,29,28<br>HEBA 22,27,30,31 |

..2

| | | | |
|---|---|---|---|
| 07 | EB-386 | ಪದ್ಮಾವತಿ ವಿಜ್ಞಾನ ಪದವಿ ಪೂರ್ವ ಕಾಲೇಜು, ಸರ್ವೆ ನಂ 239, ಮಹಾಲಿಂಗಪೂರ ರಸ್ತೆ, ಹೊಸೂರ-ರಬಕವಿ-587314, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | PCMB-33,34,35,36 |

**ಷರತ್ತುಗಳು:**

1. ಈ ಅನುಮತಿಯು 2017-18ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಡೆಯತಕ್ಕದ್ದು.
4. ಹಾಲಿ ಅನುಮತಿಸಿರುವ ಹೆಚ್ಚುವರಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
6. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.
7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ದೆ ಉಂಟಾಗಬಾರದು.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಛೇರಿಗೆ ಸಲ್ಲಿಸತಕ್ಕದ್ದು.
11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರತಿ ಎಂದು ಪರಿಗಣಿಸತಕ್ಕದ್ದಲ್ಲ.
12. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

**ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ)**

23.6.17

ಜಂಟಿ ನಿರ್ದೇಶಕರು,
ಮಾನ್ಯತೆ ಮತ್ತು ಅನುದಾನ,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು,**

1. ಸಂಭಂದಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮಾಹಿತಿಗಾಗಿ
2. ಸಂಭಂದಪಟ್ಟ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ. 3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಪಮೂಶಿ/ಸಿಬ್ಬಂದಿ-3/ಜೆಹೆಚ್/ದಾಹೆಚ್ಚಳ/2017-18

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರ
ಬೆಂಗಳೂರು-560012
ದಿನಾಂಕ 23-06-2017.

**ಜ್ಞಾಪನ**

ವಿಷಯ ಹಾವೇರಿ ಜಿಲ್ಲೆಯ ಖಾಸಗಿ ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಕುರಿತು.

ಉಲ್ಲೇಖ: 1. ಜಿಲ್ಲಾ ಉಪ ನಿರ್ದೇಶಕರು ಹಾಗೂ ಪ್ರಾಚಾರ್ಯರಿಂದ ಬಂದ ಮನವಿ ಪತ್ರಗಳು.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 373 ಎಸ್‌ಹೆಚ್‌ಹೆಚ್ 2017 ದಿನಾಂಕ 12-06-2017.

* * * * *

ಹಾವೇರಿ ಜಿಲ್ಲೆಯಲ್ಲಿನ ಖಾಸಗಿ ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಬೋಧಿಸುತ್ತಿರುವ ಸಂಯೋಜನೆ/ವಿಭಾಗಗಳಲ್ಲಿ 2017-18ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ಕೋರಿ ಜಿಲ್ಲಾ 2017-18ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಿತಿಯನ್ನು 80 ರಿಂದ 100ಕ್ಕೆ ಹೆಚ್ಚಿಸುವಂತೆ ಕೋರಿ ಉಲ್ಲೇಖ-1ರ ಪತ್ರದ ಮೂಲಕ ಸಲ್ಲಿಸಿರುವ ಮನವಿ ಪತ್ರಗಳನ್ನು ಪರಿಶೀಲಿಸಲಾಯಿತು.

ಉಲ್ಲೇಖ-2ರ ಸರ್ಕಾರದ ಪತ್ರದಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ದಾಖಲಾತಿ ಮಿತಿಯನ್ನು 80-100ಕ್ಕೆ ಹೆಚ್ಚಿಸುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಮೂದಿಸಿರುವ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಸಂಯೋಜನೆಗಳಿಗೆ ದಾಖಲಾತಿ ಮಿತಿಯನ್ನು ಪ್ರಥಮ ಪಿಯುಸಿಯಲ್ಲಿ 20 ವಿದ್ಯಾರ್ಥಿಗಳನ್ನು ಹೆಚ್ಚುವರಿಯಾಗಿ 2017-18ನೇ ಸಾಲಿಗೆ ದಾಖಲು ಮಾಡಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ.

| ಕ್ರ.ಸಂ | ಕಾಲೇಜಿನ ಹೆಸರು & ವಿಳಾಸ (ಕಾಲೇಜು ಸಂಕೇತ ಸಂಖ್ಯೆ:) | ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ ಸಂಯೋಜನೆಗಳು ಮತ್ತು ವಿಭಾಗಗಳು | |
|---|---|---|---|
| 1 | ಎನ್.ಡಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅಕ್ಕಿ-ಆಲೂರು, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ, (ಜೆಹೆಚ್-044) | ಇ.ಜಿ.ಬಿ.ಎ (22.24.27.30) | 1 ವಿಭಾಗಕ್ಕೆ |
| 2 | ಜಿ.ಹೆಚ್ ಪದವಿ ಪೂರ್ವ ಕಾಲೇಜು, ಹಾವೇರಿ.(ಜೆಹೆಚ್-031) | ಪಿ.ಸಿ.ಎಂ.ಬಿ (33.34.35.36) | 3 ವಿಭಾಗಗಳಿಗೆ |
| | | ಹೆಚ್.ಇ.ಜಿ.ಪಿ (21.22.24.28) | 1 ವಿಭಾಗಕ್ಕೆ |

..2

| | | | |
|---|---|---|---|
| 3 | ಬಳ್ಳಾರಿ ರುದ್ರಪ್ಪ ಪದವಿ ಪೂರ್ವ ಕಾಲೇಜು, ಹಾವೇರಿ. (ಜೆಹೆಚ್-381) | ಪಿ.ಸಿ.ಎಂ.ಬಿ (33.34.35.36) | 1 ವಿಭಾಗಕ್ಕೆ |
| 4 | ದೇವಿಕಾ ವಿಜ್ಞಾನ ಪದವಿ ಪೂರ್ವ ಕಾಲೇಜು, ರಾಣೆಬೆನ್ನೂರು, ಹಾವೇರಿ ಜಿಲ್ಲೆ (ಜೆಹೆಚ್-298) | ಪಿ.ಸಿ.ಎಂ.ಬಿ (33.34.35.36) | 2 ವಿಭಾಗಗಳಿಗೆ |
| 5 | ನ್ಯೂ ಸಂ. ಪದವಿ ಪೂರ್ವ ಕಾಲೇಜು ಹಾನಗಲ್ ಹಾವೇರಿ ಜಿಲ್ಲೆ,(ಜೆಹೆಚ್-043) | ಹೆಚ್.ಇ.ಬಿ.ಎ (21.22.27.30) | 1 ವಿಭಾಗಕ್ಕೆ |
| 6 | ರೋಟರಿ ಪದವಿ ಪೂರ್ವ ಕಾಲೇಜು, ರಾಣೆಬೆನ್ನೂರು, ಹಾವೇರಿ ಜಿಲ್ಲೆ (ಜೆಹೆಚ್-162) | ಇ.ಬಿ.ಎ.ಎಸ್-22.27.30.31 | 1 ವಿಭಾಗಕ್ಕೆ |
| 7 | ಕೆ.ಹೆಚ್ ಪಾಟೀಲ ಪದವಿ ಪೂರ್ವ ಕಾಲೇಜು, ಹಿರೆಕೆರೂರು, ಹಾವೇರಿ ಜಿಲ್ಲೆ (ಜೆಹೆಚ್-037) | ಪಿ.ಸಿ.ಎಂ.ಬಿ (33.34.35.36) | 2 ವಿಭಾಗಗಳಿಗೆ |
| | | ಇ.ಜಿ.ಬಿ.ಎ (22.24.27.30) | 1 ವಿಭಾಗಕ್ಕೆ |
| 8 | ಆರ್.ಟಿ.ಇ.ಎಸ್ ಪದವಿ ಪೂರ್ವ ಕಾಲೇಜು, ರಾಣೆಬೆನ್ನೂರು, ಹಾವೇರಿ ಜಿಲ್ಲೆ (ಜೆಹೆಚ್-034) | ಪಿ.ಸಿ.ಎಂ.ಬಿ (33.34.35.36) | 2 ವಿಭಾಗಗಳಿಗೆ |
| | | ಇ.ಜಿ.ಬಿ.ಎ (22.24.27.30) | 1 ವಿಭಾಗಕ್ಕೆ |

**ಷರತ್ತುಗಳು:**

1. ಅನುಮತಿಯು 2017-18ನೇ ಶೈಕ್ಷಣಿಕ ಸಾಲಿನ ಪ್ರಥಮ/ದ್ವಿತೀಯ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಕೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.
4. ಸಂಬಂಧಪಟ್ಟ ಆಡಳಿತ ಮಂಡಳಿಗಳು ಶಿಕ್ಷಣ ಅಧಿನಿಯಮ 1983 ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.
5. ಈ ಹೆಚ್ಚುವರಿ ದಾಖಲೆಯ ವಿಷಯ / ಸಂಯೋಜನೆಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ನಿಯಮಾನುಸಾರ ಒದಗಿಸಿಕೊಳ್ಳತಕ್ಕದ್ದು.
6. ಹಾಲಿ ಅನುಮತಿಸಿರುವ ಹೆಚ್ಚುವರಿ ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
7. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.
9. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು.
10. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4 ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.

..3

11. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
12. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಚೇರಿಗೆ ಸಲ್ಲಿಸತಕ್ಕದ್ದು.
13. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರಾತಿ ಎಂದು ಪರಿಗಣಿಸತಕ್ಕದ್ದಲ್ಲ.
14. ಹೆಚ್ಚುವರಿ ವಿಷಯ / ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.
15. ಜಿಲ್ಲಾ ಉಪ ನಿರ್ದೇಶಕರು ಮೂಲಭೂತ ಸೌಕರ್ಯಗಳಿರುವುದನ್ನು ಖಚಿತಪಡಿಸಿಕೊಳ್ಳುವುದು.

**# ಟಿಪ್ಪಣಿ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ #**

23.6.17

ಜಂಟಿ ನಿರ್ದೇಶಕರು(ಪ್ರಾ&ಅ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:**

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾವೇರಿ ಜಿಲ್ಲೆ, ಹಾವೇರಿ.
2. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳಿಗೆ.
3. ಗಣಕಶಾಖೆ, ಕೇಂದ್ರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-ಮುಂದಿನ ಕ್ರಮಕ್ಕಾಗಿ.
4. ಇ-ಆಡಳಿತ ಶಾಖೆ, ಕೇಂದ್ರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ಕಚೇರಿ/ಹೆಚ್ಚುವರಿ ಪ್ರತಿ.